# ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560001. ದೂರವಾಣಿ : 080-22224212

ಸಂಖ್ಯೆ : ಸಿಆಸುಇ 16 ಮಾಸ(ಅಮುಚು 3)2018 ದಿನಾಂಕ : 10-5-2018.

## ಪತ್ರಿಕಾ ಪ್ರಕಟಣೆ

**ಮೇ 11, 12 ರಂದು ಮಾಧ್ಯಮ ಚುನಾವಣಾ ಜಾಹೀರಾತಿಗೆ ಪ್ರಮಾಣೀಕರಣ ಕಡ್ಡಾಯ**

**ಬೆಂಗಳೂರು, ಮೇ 10 :** ರಾಜಕೀಯ ಪಕ್ಷಗಳು ಅಥವಾ ಅಭ್ಯರ್ಥಿಗಳು ಅಥವಾ ಯಾವುದೇ ಸಂಸ್ಥೆ ಅಥವಾ ವ್ಯಕ್ತಿಯು ಮುದ್ರಣ ಮಾಧ್ಯಮಗಳಲ್ಲಿ ಮೇ 11 ಹಾಗೂ 12 ರಂದು ಪ್ರಕಟಿಸುವ ಜಾಹೀರಾತುಗಳಿಗೆ ರಾಜ್ಯ ಅಥವಾ ಜಿಲ್ಲಾ ಮಟ್ಟದ ಎಂಸಿಎಂಸಿ ಸಮಿತಿಯಿಂದ ಪೂರ್ವ ಪ್ರಮಾಣೀಕರಣ ಪಡೆಯುವುದು ಕಡ್ಡಾಯ ಎಂದು ಭಾರತ ಚುನಾವಣಾ ಆಯೋಗವು ತಿಳಿಸಿದೆ.

ಮತದಾನ ದಿನದ 48 ಗಂಟೆಗಳ ಮುಂಚಿತವಾಗಿ ರಾಜಕೀಯ ಜಾಹೀರಾತು ಹಾಗೂ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಭಾರತ ಚುನಾವಣಾ ಆಯೋಗವು ಮಾರ್ಗಸೂಚಿಗಳನ್ನು ನಿಗದಿಪಡಿಸಿದೆ.

ವಿದ್ಯುನ್ಮಾನ ಮಾಧ್ಯಮಗಳಲ್ಲಿ ಮತದಾನ ಮುಗಿಯುವ ಸಮಯಕ್ಕೆ ಮುಂಚಿತವಾದ 48 ಗಂಟೆಗಳ ಅವಧಿಯಲ್ಲಿ ಟಿವಿ/ ರೇಡಿಯೋ, ಕೇಬಲ್ ವಾಹಿನಿಗಳು ಮತ್ತು ಎಲ್ಲ ಡಿಜಿಟಲ್ ಮಾಧ್ಯಮಗಳಲ್ಲಿ ಚುನಾವಣೆಯ ಫಲಿತಾಂಶದ ಮೇಲೆ ಪ್ರಭಾವ ಬೀರುವ ಯಾವುದೇ ಚುನಾವಣಾ ಸಂಬಂಧಿ ಕಾರ್ಯಕ್ರಮ, ವಿಷಯವನ್ನು ಪ್ರಸಾರ ಮಾಡುವಂತಿಲ್ಲ. ಅಭಿಪ್ರಾಯಗಳು, ಪ್ಯಾನೆಲ್ ಚರ್ಚೆಗಳು, ವಿಶ್ಲೇಷಣೆ, ಸಮೀಕ್ಷೆ ಫಲಿತಾಂಶ, ಸೌಂಡ್ ಬೈಟ್ ಮೊದಲಾದವುಗಳನ್ನು ಪ್ರಸಾರ ಮಾಡುವಂತಿಲ್ಲ ಎಂದು ಮಾರ್ಗಸೂಚಿಯಲ್ಲಿ ಹೇಳಿದೆ.

************